KAYG030049432018

<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಯಾದಗಿರಿ</u>

<u>ಉಪಸ್ಥಿತರು:</u>- ಶ್ರೀ ಅರುಣ ಚೌಗುಲೆ
ಬಿ.ಎ.ಎಲ್‌ಎಲ್ ಬಿ.,
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ನ್ಯಾಯಾಲಯ ಯಾದಗಿರಿ

<u>ದಿನಾಂಕ **25** ನೇ ಮಾರ್ಚ್ **2026**</u>

<u>ಸಿ.ಸಿ. ನಂ.**824/2018**</u>

| | | |
|---|---|---|
| <u>ಫಿರ್ಯಾದುದಾರರು</u> | : | ಸರ್ಕಾರದ ಪರವಾಗಿ<br>ಅಬಕಾರಿ ನಿರೀಕ್ಷಕರು, ಯಾದಗಿರಿ.<br><br>( ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು) |
| ವಿರುದ್ಧ | | |
| ಆರೋಪಿತರು | : | 1. ಶ್ರೀ ವೆಂಕಟೇಶ ತಂದೆ ಮರೆಪ್ಪ ಶ್ರೀಗಿರಿ, ವಃ 35 ವರ್ಷ, ಸಾಃ ಈ/54, ಶಹಾಬಾದ ರೋಡ, ಪ್ರಶಾಂತ ನಗರ(ಎ), ರಾಜಾಪೂರ, ತಾಃ ಮತ್ತು ಜಿಃ ಕಲಬುರಗಿ.<br><br>2. ಶ್ರೀ ಲಕ್ಷ್ಮಣ ತಂದೆ ಹನುಮಪ್ಪ ಕಡ್ಡಿ (ಮರಣಹೊಂದಿರುತ್ತಾನೆ) |
| | | (1 ನೇ ಆರೋಪಿತನ ಪರವಾಗಿ ಶ್ರೀ ಎಂ.ಬಿ.ಪಿ ವಕೀಲರು)<br>(2 ನೇ ಆರೋಪಿತನು ಮರಣ ಹೊಂದಿರುತ್ತಾನೆ) |

KAYG030049432018

| | |
|---|---|
| **1.** ಅಪರಾಧ ನಡೆದ ದಿನಾಂಕ | : **09.02.2018** |
| **2.**ಅಪರಾಧ ವರದಿ ಮಾಡಿದ ದಿನಾಂಕ | : **09.04.2018** |
| **3.** ಪಿರ್ಯಾದುದಾರರ ಹೆಸರು | : ಶ್ರೀ ವಿ.ಕೆ ಗಾಣಿಗೇರ<br>ಅಬಕಾರಿ ನೀರಿಕ್ಷಕರು |
| **4.** ಸಾಕ್ಷ್ಯ ಪ್ರಾರಂಭವಾದ ದಿನಾಂಕ | : **31.08.2024** |
| **5.** ಸಾಕ್ಷ್ಯ ಮುಕ್ತಾಯವಾದ ದಿನಾಂಕ | : **10.02.2026** |
| **6.**ಆರೋಪಿತನ ಮೇಲೆ ಹೊರಿಸಲಾದ ಆರೋಪ | : ಕರ್ನಾಟಕ ಅಬಕಾರಿ ಕಾಯ್ದೆ ಕಲಂ **32** ಮತ್ತು **38(ಎ).** |
| **7.** ನ್ಯಾಯಾಧೀಶರ ಅಭಿಪ್ರಾಯ | : **1** ನೇ ಆರೋಪಿತನನ್ನು ಬಿಡುಗಡೆ ಮಾಡಲಾಗಿದೆ. |

::ತೀರ್ಪು::

ಈ ಪ್ರಕರಣವನ್ನು ಯಾದಗಿರಿ ವಲಯದ ಅಬಕಾರಿ ಉಪ-ನೀರಿಕ್ಷಕರು ಆರೋಪಿತರ ವಿರುದ್ಧ ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ಮತ್ತು 38(ಎ) ರ ರೀತ್ಯಾ ಶಿಕ್ಷಾರ್ಹವಾದ ಅಪರಾಧಗಳನ್ನು ಮಾಡಿದ್ದಾರೆ ಎಂದು ಸಲ್ಲಿಸಿದ ದೋಷಾರೋಪಣಾ ಪಟ್ಟಿಯ ಆಧಾರದ ಮೇಲೆ ದಾಖಲಿಸಿಕೊಳ್ಳಲಾಗಿರುತ್ತದೆ.

**2.** ಅಭಿಯೋಜನೆಯವರ ಪ್ರಕರಣದ ಸಂಕ್ಷಿಪ್ತ ವಿವರ ಏನೆಂದರೆ:-

ದಿನಾಂಕಃ 09.02.2018 ರಂದು ಸಂಜೆ 04.30 ಗಂಟೆ ಸುಮಾರಿಗೆ ಚಾಸಾ-6 ಅಬಕಾರಿ ನಿರೀಕ್ಷಕರು ತಮಗೆ ಬಂದ ಖಚಿತ ಮಾಹಿತಿ ಮೇರೆಗೆ ತಮ್ಮ ಸಿಬ್ಬಂದಿ ಹಾಗೂ ಪಂಚರೊಂದಿಗೆ ಅಲಿಪುರ ಕ್ರಾಸ್ ನಿಂದ ಯರಗೋಳದ ಕಡೆಗೆ ಹೋಗುವ ರಸ್ತೆಯಲ್ಲಿ 02

ಕಿ.ಮೀ. ದೂರದಲ್ಲಿ ರಸ್ತೆಗಾವಲು ಮಾಡುತ್ತಿದ್ದಾಗ 1 ನೇ ಅರೋಪಿತನು 2 ನೇ ಆರೋಪಿಗೆ ಸೇರಿದ ಹೋಂಡಾ ಶೈನ್ ದ್ವಿಚಕ್ರ ವಾಹನ ಸಂಖ್ಯೆ: ಕೆಎ-33-ಯು-9030 ನೇದ್ದರಲ್ಲಿ 90 ಮಿಲಿಯ 48 ಓರಿಜಿನಲ್ ಚಾಯ್ಸ ವಿಸ್ಕಿಯ ಟೆಟ್ರಾ ಪ್ಯಾಕಗಳು, 330 ಮಿಲಿಯ 36 ಕಿಂಗ್ ಫಿಶರ್ ಟಿನ್ಗಳು ಮತ್ತು 650 ಮಿಲಿಯ 12 ಕಿಂಗ್ ಫಿಷರ್ ಬಾಟಲಿಗಳನ್ನು ಕಾನೂನು ಬಾಹಿರವಾಗಿ ಮಾರಾಟದ ಉದ್ದೇಶಕ್ಕಾಗಿ ಸಾಗಾಣಿಕೆ ಮಾಡುತ್ತಿರುವುದು ಕಂಡುಬಂದಿದ್ದು, ಆ ಮೂಲಕ ಆರೋಪಿತರು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ಮತ್ತು 38(ಎ) ರಡಿಯಲ್ಲಿ ಅಪರಾಧ ಎಸಗಿದ್ದಾರೆಂದು ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿದ್ದಾರೆ.

3. ದೋಷಾರೋಪಣಾ ಪಟ್ಟಿ ಸಲ್ಲಿಸಿದ ನಂತರ ಆರೋಪಿತರಿಗೆ ಸಮನ್ಸ್ ಹೊರಡಿಸಲಾಗಿ 1 ನೇ ಆರೋಪಿ ತಮ್ಮ ವಕೀಲರ ಮೂಲಕ ಈ ನ್ಯಾಯಾಲಯದ ಮುಂದೆ ಹಾಜರಾಗಿ ಜಾಮೀನು ಅರ್ಜಿ ಸಲ್ಲಿಸಿದ್ದರಿಂದ ಅವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ. 2 ನೇ ಆರೋಪಿತನು ಮರಣ ಹೊಂದಿದ್ದಾನೆ ಎಂದು ವರದಿಯಾಗಿದ್ದರಿಂದ ಆತನ ವಿರುದ್ಧ ಪ್ರಕರಣವನ್ನು ಮುಕ್ತಾಯಗೊಳಿಸಲಾಗಿದೆ.

4. ದಂಡ ಪ್ರಕ್ರಿಯಾ ಸಂಹಿತೆ ಕಲಂ 207 ರಡಿ ಅವಶ್ಯವಿರುವಂತೆ ದೋಷಾರೋಪಣ ಪತ್ರದ ಪ್ರತಿಯನ್ನು 1 ನೇ ಆರೋಪಿತನಿಗೆ ಪೂರೈಸಿ, ನಂತರ ಆತನ ವಿರುದ್ಧ ಸಾಕಷ್ಟು ಸಾಕ್ಷ್ಯಾಧರಗಳು ಕಂಡುಬಂದಿದ್ದರಿಂದ ದೋಷಾರೋಪಣೆಯನ್ನು ನಿರೂಪಿಸಿ ಓದಿ ಹೇಳಿ ವಿವರಿಸಲಾಗಿ ಸದರಿ 1 ನೇ ಆರೋಪಿತನು ತಾನು ಯಾವುದೇ ತಪ್ಪು ಮಾಡಿಲ್ಲ ಆದ್ದರಿಂದ ವಿಚಾರಣೆಯಾಗಬೇಕೆಂದು ಕೋರಿಕೊಂಡಿರುತ್ತಾನೆ.

5. 1 ನೇ ಆರೋಪಿತನ ವಿರುದ್ಧ ಅಪರಾಧವನ್ನು ರುಜುವಾತು ಪಡಿಸಲು ಅಭಿಯೋಜನೆಯವರ ಪರವಾಗಿ ಸಾಕ್ಷಿದಾರರನ್ನು ಪ್ರಾಸಾ-1 ರಿಂದ 6 ರಂತೆ ವಿಚಾರಣೆ

ಮಾಡಲಾಗಿದೆ ಹಾಗೂ ದಸ್ತಾವೇಜುಗಳನ್ನು ನಿಪಿ-1 ರಿಂದ 6 ಎಂದು ಹಾಗೂ ಎರಡು ಖಾಲಿ ಟೆಟ್ರಾ ಪ್ಯಾಕೆಟು, ಒಂದು ಟಿನ್ ಕ್ಯಾನ್ ಮತ್ತು ಒಂದು ಬಿಯರ್ ಬಾಟಲಿಯನ್ನು ಮು.ಮಾಲು 1 ರಿಂದ 4 ಎಂದು ಗುರುತಿಸಲಾಗಿದೆ.

6. ಅಭಿಯೋಜನೆಯ ಸಾಕ್ಷ್ಯ ಮುಗಿದ ನಂತರ, 1 ನೇ ಆರೋಪಿತನ ವಿರುದ್ಧ ಅಪರಾಧ ಸೂಚಿಸುವ ಹೇಳಿಕೆಗಳನ್ನು ಅವರಿಗೆ ವಿವರಿಸಿ ಹೇಳುವ ಮೂಲಕ ಪ್ರಕ್ರಿಯಾ ಸಂಹಿತೆ ಕಲಂ 313 ರ ಅಡಿಯಲ್ಲಿ ಹೇಳಿಕೆಯನ್ನು ಪಡೆದುಕೊಂಡಿದ್ದು, ಸದರಿ 1 ನೇ ಆರೋಪಿತನು ಹೇಳಿಕೆಗಳನ್ನು ನಿರಾಕರಿಸಿದ್ದು ತಮ್ಮ ಪರ ಪ್ರತಿರಕ್ಷಣೆಯ ಸಾಕ್ಷ್ಯ ಇಲ್ಲ ಎಂದು ನುಡಿದಿರುತ್ತಾರೆ.

7. ಆನಂತರ ಉಭಯ ಪಕ್ಷಗಾರರ ವಾದ-ವಿವಾದಗಳನ್ನು ಆಲಿಸಿ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ ಈ ಕೆಳಕಂಡ ಅಂಶಗಳನ್ನು ತೀರ್ಮಾನಿಸುವುದು ಅವಶ್ಯಕ ಎಂದು ಕಂಡುಬರುತ್ತದೆ.

1) ದಿನಾಂಕ 09.02.2018 ರಂದು ಸಂಜೆ 04.30 ಗಂಟೆ ಸುಮಾರಿಗೆ ಅಬಕಾರಿ ಉಪ-ಆಯುಕ್ತರು ಯಾದಗಿರಿ ವ್ಯಾಪ್ತಿಯಲ್ಲಿ ಬರುವ ಯಾದಗಿರಿ ನಗರದಿಂದ ವಾಡಿಗೆ ಹೋಗುವ ರಸ್ತೆಯಲ್ಲಿ ಅಲ್ಲಿಪುರ ಕ್ರಾಸ್ ನಿಂದ ಯರಗೋಳದ ಕಡೆಗೆ ಹೋಗುವ ರಸ್ತೆಯಲ್ಲಿ 2 ಕಿ.ಮೀ. ದೂರದಲ್ಲಿ ರಸ್ತೆಗಾವಲು ಮಾಡುತ್ತಿದ್ದಾಗ 1 ನೇ ಆರೋಪಿತ ಮದ್ಯ ಹಾಗೂ ಬಿಯರನ್ನು ಮಾರಾಟಕ್ಕಾಗಿ ಸಾಗಾಣಿಕೆ ಮಾಡುವುದು ಕಂಡುಬಂದಿದ್ದು, ಆ ಮೂಲಕ ಆರೋಪಿತರು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ಮತ್ತು 38(ಎ) ರ ರೀತ್ಯ ಶಿಕ್ಷಾರ್ಹ ಹಾಗೂ ದಂಡನೀಯ ಅಪರಾಧವನ್ನು ಎಸಗಿದ್ದಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತು ಪಡಿಸಿರುತ್ತಾರೆಯೆ?

2) ಯಾವ ಆದೇಶ?

8. ಮೇಲಾಕಣಿಸಿದ ಅಂಶಗಳಿಗೆ ನನ್ನ ಉತ್ತರಗಳು ಈ ಕೆಳಗಿನಂತಿವೆಃ

ಅಂಶ 1 : ನಕಾರಾತ್ಮವಾಗಿ
ಅಂಶ 2 : ಅಂತಿಮ ಆದೇಶದಂತೆ ಈ
ಕೆಳಕಾಣಿಸಿದ ಕಾರಣಗಳಿಗಾಗಿಃ

<u>ಕಾರಣಗಳು</u>

9.**<u>1 ನೇ ಅಂಶ :</u>** 1 ನೇ ಆರೋಪಿತನು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ಮತ್ತು 38(ಎ) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆಂದು ಯಾದಗಿರಿ ಅಬಕಾರಿ ಉಪ-ನೀರಿಕ್ಷಕರು ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತಾರೆ. ಅಭಿಯೋಜನೆಯು ಸದರಿ ಆರೋಪವನ್ನು ಸಾಭೀತು ಪಡಿಸಲು ತಮ್ಮ ಪರವಾಗಿ ಆರು ಜನ ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸಿದ್ದಾರೆ.

10. ಚಾಸಾ-3/ಪ್ರಾಸಾ-1 ಶ್ರೀ ಶಿವಶರಣಪ್ಪ ತಂದೆ ಸಂಗಣ್ಣ, ಅಬಕಾರಿ ಪೇದೆ ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ 09.04.2018 ರಂದು ನಾನು ಚಾಸಾಃ 6 ರವರೊಂದಿಗೆ ಯಾದಗಿರಿ ಪಟ್ಟಣದಲ್ಲಿ ಗಸ್ತು ಕರ್ತವ್ಯದಲ್ಲಿ ಇದ್ದಾಗ ಅಲ್ಲಿಪೂರ ಕ್ರಾಸ್ ಹತ್ತಿರ ಯರಗೋಳ ಕಡೆಗೆ ದ್ವಿಚಕ್ರ ವಾಹದಲ್ಲಿ ಅಕ್ರಮ ಮಧ್ಯ ಸಾಗಾಟ ನಡೆದಿರುವ ಬಗ್ಗೆ ಚಾಸಾಃ 6 ರವರಿಗೆ ಖಚಿತ ಮಾಹಿತಿ ಬಂದಿರುತ್ತದೆ. ನಾವುಗಳು ಯಾದಗಿರಿ ಹೊರ ವಲಯದಲ್ಲಿನ ಜಿಲ್ಲಾಧಿಕಾರಿಯವರ ಕಚೇರಿ ಮುಂದೆ ಹೋಗಿ ಅಲ್ಲಿ ಇದ್ದ ಚಾಸಾಃ 1 ಮತ್ತು 2 ರವರನ್ನು ಪಂಚರನ್ನಾಗಿ ಬರಮಾಡಿಕೊಂಡಿರುತ್ತೇವೆ. ನಂತರ ಮುದ್ನಾಳ ತಾಂಡಾ ಮೂಲಕ ಅಲ್ಲಿಪೂರ ಕ್ರಾಸ್ ನಿಂದ ಯರಗೋಳ ಕಡೆಗೆ ಹೋಗುವ ರಸ್ತೆಯಲ್ಲಿ ರಸ್ತೆಗಾವಲು ಮಾಡುತ್ತಿರುವಾಗ ಸಾಃ 04.30 ಗಂಟಗೆ ಯಾದಗಿರಿ ಕಡೆಯಿಂದ ಒಂದು ದ್ವಿಚಕ್ರ ವಾಹನದಲ್ಲಿ ಒಬ್ಬ ಸವಾರ ಮುಂಬಾಗದಲ್ಲಿ ಚೀಲ ಇಟ್ಟುಕೊಂಡು ಬರುತ್ತಿರುವುದು ಕಂಡುಬಂದಿರುತ್ತದೆ. ಸದರಿ ವಾಹವನ್ನು ನಿಲ್ಲಿಸಿ ಆತತನನ್ನು ವಿಚಾರಿಸಿದಾಗ ಸದರಿ ವ್ಯಕ್ತಿ ಅನುಮಾನಸ್ಪದವಾಗಿ

ವರ್ತಿಸುತ್ತಿದ್ದರಿಂದ ಚಾಸಾಃ 6 ರವರು ಸ್ಥಳದಲ್ಲಿ ಶೋಧನಾ ಪತ್ರ ತಯಾರಿಸಿಕೊಂಡು ವಾಹನದ ಮೇಲೆ ಇದ್ದ ಬಿಳಿ ಬಣ್ಣದ ಗೋಣಿ ಚೀಲವನ್ನು ಪರಿಶೀಲಿಸಿ ನೋಡಲಾಗಿ ಅದರಲ್ಲಿ 90 ಮಿಲಿ ಪ್ರಮಾಣದ ಒ.ಸಿ ವಿಸ್ಕಿಯ 48 ಟೆಟ್ರಾ ಪ್ಯಾಕೇಟುಗಳು, 330 ಮಿಲಿಯ ಕೆ.ಎಪ್ ಬಿಯಾರನ 36 ಟಿನ್ ಕ್ಯಾನುಗಳು ಹಾಗೂ 650 ಮಿಲಿಯ ಕೆ.ಎಫ್ ಬಿಯಾರನ 12 ಬಾಟಲಿಗಳು ಇರುವುದು ಕಂಡು ಬಂದಿರುತ್ತದೆ. ದ್ವಿಚಕ್ಕ ವಾಹನ ಕೆಎ-33 ಯು-9030 ನಂಬರಿನ ಹೊಂಡಾ ಶೈನಿ ಆಗಿರುವುದು ಕಂಡುಬಂದಿರುತ್ತದೆ. ಸದರಿ ವ್ಯಕ್ತಿಯನ್ನು ಹೆಸರು ವಿಳಾಸ ಕೇಳಲಾಗಿ ಆತ ತನ್ನ ಹೆಸರು ವೆಂಕಟೇಶ ತಂದೆ ಮರೆಪ್ಪ ಶ್ರೀಗಿರಿ, ಸಾಃ ಶಹಬಾದ್ ರಸ್ತೆ, ಪ್ರಶಾಂತ ನಗರ, ರಾಜಾಪೂರ, ಕಲಬುರಗಿ ಎಂದು ತಿಳಿಸಿರುತ್ತಾನೆ. ಆತ ಮದ್ಯ ಸಾಗಾಟ ಮಾಡಲು ತನ್ನ ಹತ್ತಿರ ಪರವಾನಿಗೆ ಇಲ್ಲ ಎಂದ ತಿಳಿಸಿರುತ್ತಾರೆ. ನಂತರ ಮದ್ಯ ದಾಸ್ತಾನು ಬೈಕ್ ಮತ್ತು ಆರೋಪಿಯನ್ನು ವಶಕ್ಕೆ ಪಡೆದುಕೊಂಡು ದೊರೆತ ಮದ್ಯದ ಪೈಕಿ ಎರಡು ಟೆಟ್ರಾ ಪ್ಯಾಕೇಟು ಒಂದು ಬಿಯಾರ ಟಿನ್ ಕ್ಯಾನ ಮತ್ತು ಒಂದು ಬಿಯಾರ ಬಾಟಲಿಯನ್ನು ಮಾದರಿಯಾಗಿ ತೆಗೆದುಕೊಂಡಿರುತ್ತೇವೆ. ಸ್ಥಳದಲ್ಲಿ ಸಾಃ 4.30 ರಿಂದ 02.20 ಗಂಟೆ ವರೆಗೆ ಪಂಚನಾಮೆ ಜರುಗಿಸಿರುತ್ತೇವೆ. ನಂತರ ಮುದ್ದೆ ಮಾಲು ಮತ್ತು ಆರೋಪಿಯೊಂದಿಗೆ ಕಚೆರಿಗೆ ಬಂದಿದ್ದು, ಚಾಸಾಃ 6 ರವರು ಸರಕಾರದ ಪರವಾಗಿ ದೂರು ದಾಖಲು ಮಾಡಿಕೊಂಡಿರುತ್ತಾರೆ ಎಂದು ಸಾಕ್ಷ್ಯನುಡಿದಿರುತ್ತಾರೆ.

11. ಚಾಸಾ-4/ಪ್ರಾಸಾ-2 ಶ್ರೀ ಶರಣಪ್ಪ ತಂದೆ ಶಿವಗ, ನಿವೃತ್ತ ಅಬಕಾರಿ ಉಪ-ನಿರೀಕ್ಷಕರು ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ 06.06.2018 ರಂದು ಈ ಪ್ರಕರಣದ ಮಾದರಿ ಮದ್ಯವನ್ನು ರಾಸಾಯನಿಕ ಪರೀಕ್ಷೆಗಾಗಿ ರಾಯಚೂರಿನ ಪ್ರಾದೇಶಿಕ ರಾಸಾಯನಿಕ ಪರೀಕ್ಷಾ ಕೇಂದ್ರಕ್ಕೆ ತೆಗೆದುಕೊಂಡು ಹೋಗಿ ಒಪ್ಪಿಸಿ, ದಿಃ 19.06.2018 ರಂದು ವರದಿ ಪಡೆದುಕೊಂಡು ಕಚೇರಿಗೆ ತಂದು ಒಪ್ಪಿಸಿರುತ್ತೇನೆ ಎಂದು ಸಾಕ್ಷ್ಯನುಡಿದಿರುತ್ತಾರೆ.

12. ಚಾಸಾ-7/ಪ್ರಾಸಾ-5 ಶ್ರೀ ಸಿದ್ರಾಮಪ್ಪ ತಾಳಿಕೋಟೆ ತಂದೆ ಶ್ರೀಶೈಲ, ಅಬಕಾರಿ ನಿರೀಕ್ಷಕರು ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ 18.05.2018 ರಂದು ಈ ಪ್ರಕರಣದ ಕಡತವನ್ನು ಚಾಸಾಃ 6 ರವರಿಂದ ಪಡೆದುಕೊಂಡು ಪರಿಶೀಲಿಸಿ ಅದೇ ದಿನ ವಾಹನದ ಮಾಲಿಕತ್ವದ ಮಾಹಿತಿ ನೀಡುವಂತೆ ಪ್ರಾದೇಶಿಕ ಸಾರಿಗೆ ಕಚೇರಿಗೆ ಪತ್ರದ ಮೂಲಕ ನಿವೇದಿಸಿಕೊಂಡಿದ್ದೆನು. ನಂತರ ವಾಹನದ B extract ಪ್ರತಿಯನುನ್ನು ಪಡೆದು ಪರಿಶೀಲಿಸಲಾಗಿ ವಾಹನ 2 ನೇ ಆರೋಪಿ ಲಕ್ಷ್ಮಣ ರವರ ಹೆಸರಿನಲ್ಲಿ ಇರುವುದಾಗಿ ಕಂಡುಬಂದಿರುತ್ತದೆ. ನಂತರ 26.07.2018 ರಂದು ಆರೋಪಿತರ ವಿರುದ್ದ ನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಸಿರುತ್ತೇನೆ ಎಂದು ಸಾಕ್ಷ್ಯನುಡಿದಿರುತ್ತಾರೆ.

13. ಚಾಸಾ-6/ಪ್ರಾಸಾ-6 ಶ್ರೀ ವಿ.ಕೆ ಗಾಣಗೇರ್, ಅಬಕಾರಿ ಉಪ-ಅಧೀಕ್ಷಕರು ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕಃ 09-04-2018 ರಂದು ನಾನು ಕಚೇರಿಯಲ್ಲಿದ್ದಾಗ ಮಃ 03.5 ಗಂಟೆಗೆ ಯಾದಗಿರಿ-ವಾಡಿ ರಸ್ತೆಯಲ್ಲಿ ಬೈಕಿನಲ್ಲಿ ಮದ್ಯ ಹಾಗೂ ಬಿಯಾರ್ ಸಾಗಾಟ ನಡೆದಿರುವ ಬಗ್ಗೆ ಮಾಹಿತಿ ಬಂದಿರುತ್ತದೆ. ನಂತರ ನಾನು ಹಾಗೂ ಚಾಸಡಾ೦ 3 ರವರು ಯಾದಗಿರಿ ಜಿಲ್ಲಾಧಿಕಾರಿಗಳ ಕಚೇರಿ ಹತ್ತಿರ ಹೋಗಿ ಚಾಸಾಃ 1 ಮತ್ತು 2 ರವರನ್ನು ಪಂಚರನ್ನಾಗಿ ಕರೆದುಕೊಂಡು ಅಲಿಪುರ ರಸ್ತೆಯಲ್ಲಿ ರಸ್ತೆಗಾವಲು ಮಾಡುತ್ತಿದ್ದೆವು. ಆಗ ಒಂದು ದ್ವಿಚಕ್ರ ವಾಹನದ ಮೇಲೆ ಬಿಳಿ ಗೋಣಿ ಚೀಲ ಇಟ್ಟುಕೊಂಡು ಬರುವುದು ಕಂಡುಬಂದಿರುತ್ತದೆ. ನಾವು ಸದರಿ ವಾಹನವನ್ನು ನಿಲ್ಲಿಸಿ ಸ್ಥಳದಲ್ಲಿ ಶೋದನಾ ಸಮುಚಿತ ಪತ್ರವನ್ನು ತಯಾರಿಸಿಕೊಂಡು ಪರಿಶೀಲನೆ ಮಾಡಲಾಗಿ ಮದ್ಯ ಹಾಗೂ ಬಿಯಾರ್ ಇರುವುದು ಕಂಡಬಂದಿರುತ್ತದೆ. ಬೈಕ್ ಚಾಲಕನಾಗಿದ್ದ ಆರೋಪಿ ಪರವಾನಿಗೆ ಇದೆಯೇ ಎಂದು ಕೇಳಿದಾಗ ಯಾವುದೇ ಉತ್ತರ ನೀಡಿರುವುದಿಲ್ಲ. ನಂತರ ಪರಿಶೀಲಿಸಿ ನೋಡಲಾಗಿ 90 ಮಿಲಿಯ ಒಸಿ ವಿಸ್ಕಿಯ 48 ಟೆಟ್ರಾ ಪಾಕೇಟುಗಳು, 330 ಮಿಲಿಯ 36 ಕೆ ಎಫ್ ಟಿನ್ ಗಳು ಹಾಗೂ 650

ಮಿಲಿಯ 12 ಕೆ ಎಫ್ ಬಾಟಲಿಗಳು ಇರುವುದು ಕಂಡುಬಂದಿರುತ್ತದೆ. ಅವುಗಳನ್ನು ವಶಕೆ ಪಡೆದು ಎರಡು ಟೆಟ್ರಾ ಪಾಕೆಟು, ಒಂದು ಟಿನ್ ಹಾಗೂ ಒಂದು ಬಾಟಲಿಯನ್ನು ಮಾದರಿಯಾಗಿ ತೆಗೆದುಕೊಂಡಿದ್ದೆವು. ಆರೋಪಿತನನ್ನು ವಿಚಾರಿಸಲಾಗಿ ತನ್ನ ಹೆಸರು ವೆಂಕಟೇಶ ತಂದೆ ಮರೆಪ್ಪ ಶ್ರೀಗಿರಿ, ಸಾಃ ರಾಜಾಪೂರ ಎಂದು ತಿಳಿಸಿದ್ದನು. ವಾಹನ ಪರಿಶೀಲಿಸಲಾಗಿ ಅದು ಕೆಎ-33 ಯು-9030 ನಂಬರಿನ ಹೊಂಡಾ ಶೈನ್ ಬೈಕ್ ಆಗಿರುವುದು ಕಂಡುಬಂದಿರುತ್ತದೆ. ಸ್ಥಳದಲ್ಲಿ ಸಾಃ 4.30 ರಿಂದ 5.30 ವರೆಗೆ ಪಂಚನಾಮೆ ಮಾಡಿರುತ್ತೇನೆ. ಅದನ್ನು ಪಂಚರಿಗೆ ಓದಿ ಹೇಳಿ ಅವರ ಸಹಿ ಪಡೆದುಕೊಂಡಿರುತ್ತೇನೆ. ನಂತರ ಆರೋಪಿ ಹಾಗೂ ಮು.ಮಾಲಿನೊಂದಿಗೆ ಕಚೇರಿಗೆ ಬಂದು ಸರಕಾರದ ಪರವಾಗಿ ದೂರು ದಾಖಲಿಸಿರುತ್ತೇನೆ. ನಂತರ ದಿಃ 06.06.2018 ರಂದು ಚಾಸಾಃ 4 ರವರ ಮಾದರಿ ಮು.ಮಾಲನ್ನು ಮುಾಲಕ ರಾಸಾಯನಿಕ ಪರೀಕ್ಷೆಗೆ ಕಳುಹಿಸಿಕೊಟ್ಟಿರುತ್ತೇನೆ. ಅಲ್ಲದೇ ಚಾಸಾಃ 3 ರವರ ಹೇಳಿಕೆಯನ್ನು ಸಹ ಪಡೆದುಕೊಂಡಿದ್ದೆನು. ನಂತರ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾಃ 7 ರವರಿಗೆ ಒಪ್ಪಿಸಿದ್ದೆನು ಎಂದು ಸಾಕ್ಷ್ಯ ನುಡಿದಿರುತ್ತಾರೆ.

14. ಮೇಲ್ಕಂಡ ಮೌಖಿಕ ಸಾಕ್ಷ್ಯ ಹಾಗೂ ಅಭಿಯೋಜನೆಯ ಪರವಾಗಿ ಹಾಜರು ಪಡಿಸಿದ ದಾಖಲಾತಿಗಳನ್ನು ಪರಿಶೀಲಿಸಲಾಯಿತು.

15. ಈ ಪ್ರಕರಣದಲ್ಲಿ ಚಾಸಾ-6/ಪ್ರಾಸಾ-6 ಅಬಕಾರಿ ನಿರೀಕ್ಷಕರು ತಮಗೆ ಬಂದ ಖಚಿತ ಮಾಹಿತಿ ಮೇರೆಗೆ ಅಲಿಪುರ ಕ್ರಾಸನಿಂದ ಯರಗೋಳ ಗ್ರಾಮದ ಕಡೆಗೆ ಹೋಗುವ ರಸ್ತೆಯಲ್ಲಿ ತಮ್ಮ ಸಿಬ್ಬಂದಿ ಮತ್ತು ಪಂಚರೊಂದಿಗೆ ರಸ್ತೆಗಾವಲು ಮಾಡುತ್ತಿದ್ದಾಗ ಸಂಜೆ 04.30 ಗಂಟೆಗೆ 1 ನೇ ಆರೋಪಿ 2 ನೇ ಆರೋಪಿತನ ಮಾಲಿಕತ್ವದ ಬೈಕಿನಲ್ಲಿ ಮಾರಾಟ ಮಾಡುವ ಉದ್ದೇಶದಿಂದ 90 ಮಿಲಿಯ 48 ಓರಿಜಿನಲ್ ಚಾಯ್ಸ ವಿಸ್ಕಿಯ ಟೆಟ್ರಾ ಪ್ಯಾಕಗಳು, 330

ಮಿಲಿಯ 36 ಕಿಂಗ್ ಫಿಶರ್ ಟಿನ್ಗಳು ಮತ್ತು 650 ಮಿಲಿಯ 12 ಕಿಂಗ್ ಫಿಷರ್ ಬಾಟಲಿಗಳನ್ನು ಸಾಗಾಟ ಮಾಡುತ್ತಿರುವುದು ಕಂಡುಬಂದಿದ್ದು, ಸದರಿ ಮದ್ಯ ಹಾಗೂ ಬೈಕನ್ನು ಪಂಚರ ಸಮಕ್ಷಮ ಜಪ್ತಿ ಪಡಿಸಿಕೊಂಡಿರುತ್ತಾರೆ ಎಂಬುದು ಅಭಿಯೋಜನೆಯ ಪ್ರಕರಣವಾಗಿರುತ್ತದೆ.

16. ನಿಪಿ-1 ರ ಜಪ್ತಿ ಪಂಚನಾಮೆ ಸಾಕ್ಷಿದಾರರು ಎಂದು ಹೇಳಲಾದ ಫ್ರಾಸಾ-3 ಮತ್ತು 4 ರವರು ಪ್ರಕರಣದ ಮುಖ್ಯ ಸಾಕ್ಷಿದಾರರಾಗಿರುತ್ತಾರೆ. ಆದರೆ ಫ್ರಾಸಾ-3 ಮತ್ತು 4 ರವರು ಅಭಿಯೋಜನೆಯ ಪ್ರಕರಣಕ್ಕೆ ಸಂಪೂರ್ಣ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಸದರಿಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಈ ಪ್ರಕರಣದ ಬಗ್ಗೆ ತಮಗೆ ಯಾವುದೇ ಮಾಹಿತಿ ಇಲ್ಲ, ತಮ್ಮ ಸಮಕ್ಷಮ ಪೋಲಿಸರು ಯಾವುದೇ ಪಂಚನಾಮೆ ಮಾಡಿಲ್ಲ ಹಾಗೂ ಯಾವುದೇ ವಸ್ತು ಜಪ್ತಿ ಮಾಡಿಕೊಂಡಿಲ್ಲ ಎಂದು ಸಾಕ್ಷ್ಯ ನುಡಿದಿದ್ದಾರೆ. ಆದ್ದರಿಂದ ಅಭಿಯೋಜನೆಯು ಸದರಿ ಪಂಚನಾಮೆಯನ್ನು ರುಜುವಾತುಪಡಿಸುವಲ್ಲಿ ವಿಫಲವಾಗಿದೆ ಎಂಬುದು ಈ ನ್ಯಾಯಾಲಯದ ಅಭಿಪ್ರಾಯವಾಗಿದೆ.

17. ಈ ಪ್ರಕರಣದಲ್ಲಿ ಅಬಕಾರಿ ಅಧಿಕಾರಿಗಳು ಹಾಗೂ ಸಿಬ್ಬಂದಿಗಳಾದ ಫ್ರಾಸಾ-1, 2, 5 ಮತ್ತು 6 ರವರು ಮಾತ್ರ ಪ್ರಕರಣಕ್ಕೆ ಪೂರಕವಾಗಿ ಸಾಕ್ಷ್ಯ ನುಡಿದಿದ್ದು, ಅವರ ಹೇಳಿಕೆಗಳನ್ನು ಸಮರ್ಥಿಸಿಕೊಳ್ಳುವ ಯಾವುದೇ ಸ್ವತಂತ್ರ ಸಾಕ್ಷಿದಾರರ ಹೇಳಿಕೆಗಳು ಕಡತದ ಮೇಲೆ ಇರುವುದಿಲ್ಲ. ತನಿಖಾಧಿಕಾರಿಯಾದ ಫ್ರಾಸಾ-5 ರವರು ಗುನ್ನೆ ಜಾಗದ ಅಕ್ಕ-ಪಕ್ಕದ ಜನರನ್ನು ವಿಚಾರಿಸಿ ಯಾವುದೇ ಹೇಳಿಕೆಯನ್ನು ಸಹ ಪಡೆದುಕೊಂಡಿಲ್ಲ. ಈಗಾಗಲೇ ನೋಡಿದ ಹಾಗೆ ಪಂಚನಾಮೆ ಸಾಕ್ಷಿದಾರರು ಎಂದು ಹೇಳಲಾದ ಫ್ರಾಸಾ-3 ಮತ್ತು 4 ರವರು ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ ಯಾವುದೇ ಸ್ವತಂತ್ರ ಸಾಕ್ಷಿದಾರರ

ಪೂರಕವಾದ ಹೇಳಿಕೆಗಳು ಇಲ್ಲದೆ ಕೇವಲ ಫ್ರಾಸಾ-1, 2, 5 ಮತ್ತು 6 ರವರ ಹೇಳಿಕೆಗಳನ್ನು ಮಾತ್ರ ಆಧರಸಿ 1 ನೇ ಆರೋಪಿತನನ್ನು ದೋಷಿಯೆಂದು ತಿರ್ಮಾನಿಸಿ ಶಿಕ್ಷೆಗೆ ಗುರಿಪಡಿಸುವುದು ಸಮಂಜಸವಲ್ಲ ಎಂಬುದು ಈ ನ್ಯಾಯಾಲಯದ ಅಭಿಫ್ರಾಯವಾಗಿರುತ್ತದೆ.

18. ಈ ಮೇಲಿನ ಎಲ್ಲಾ ಕಾರಣಗಳಿಂದಾಗಿ 1 ನೇ ಆರೋಪಿ ಬೈಕಿನಲ್ಲಿ ಅಕ್ರಮ ಮದ್ಯ ಸಾಗಾಟ ಮಾಡುತ್ತಿದ್ದನು ಎಂಬುದನ್ನು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸುವಲ್ಲಿ ವಿಫಲವಾಗಿದೆ. ಆದ್ದರಿಂದ ಈ ನ್ಯಾಯಾಲಯವು ಅಭಿಯೋಜನೆಯ ಪ್ರಕರಣವು ಸಾಕಷ್ಟ ಅನುಮಾನಗಳಿಂದ ಕೂಡಿದ್ದು ಅದರ ಲಾಭವನ್ನು 1 ನೇ ಆರೋಪಿತನು ಪಡೆಯಲು ಅರ್ಹರಾಗಿರುತ್ತಾನೆ ಎಂಬ ಅಭಿಫ್ರಾಯಕ್ಕೆ ಬಂದಿರುತ್ತದೆ. ಅಭಿಯೋಜನೆಯು 1 ನೇ ಆರೋಪಿತನ ವಿರುದ್ಧ ಮಾಡಲಾದ ದೋಷಾರೋಪಣೆಯನ್ನು ಸಂಶಯಾತೀತವಾಗಿ ರಜುವಾತು ಪಡಿಸುವಲ್ಲಿ ಈ ಮೇಲೆ ಹೇಳಿದ ಕಾರಣಗಳಿಂದ ವಿಫಲವಾಗಿರುವುದರಿಂದ 1 ನೇ ಅಂಶವನ್ನು ನಕರಾತ್ಮಕವಾಗಿ ಉತ್ತರಿಸಲಾಗಿದೆ.

19. 2 ನೇ ಅಂಶ: ಅಂಶ 1 ನ್ನು ನಕಾರಾತ್ಮಕವಾಗಿ ಉತ್ತರಿಸಿರುವುದರಿಂದ, ಈ ಕೆಳಕಂಡಃ

ಆದೇಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1) ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರದ ಮೇರೆಗೆ 1 ನೇ ಆರೋಪಿತನನ್ನು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ಮತ್ತು 38(ಎ) ರ

ಅಡಿಯಲ್ಲಿ ಶಿಕ್ಷಿಸಬಹದಾದ ಅಪರಾಧಗಳಿಗೆ ನಿರ್ಧೋಷಿಯೆಂದು ತೀರ್ಮಾನಿಸಿ ಬಿಡುಗಡೆಗೊಳಿಸಲಾಗಿದೆ.

1 ನೇ ಆರೋಪಿತನ ಮತ್ತು ಅತನ ಜಾಮೀನುದಾರರ ಮುಚ್ಚಳಿಕೆ ಪತ್ರಗಳು 6 ತಿಂಗಳ ಅವಧಿ ಮುಗಿದ ನಂತರ ರದ್ದುಗೊಳ್ಳುವಂತೆ ಆದೇಶಿಸಲಾಗಿದೆ.

ಮು.ಮಾ-1 ರಿಂದ 4 ರಲ್ಲಿನ ಎರಡು ಖಾಲಿ ಟೆಟ್ರಾ ಪ್ಯಾಕೆಟು, ಒಂದು ಟಿನ್ ಕ್ಯಾನ್ ಮತ್ತು ಒಂದು ಬಿಯರ್ ಬಾಟಲಿ ಮೌಲ್ಯರಹಿತ ವಸ್ತುಗಳಾಗಿರುವುದರಿಂದ ಅವುಗಳನ್ನು ಮೇಲ್ಮನವಿ ಅವಧಿ ಮುಗಿದ ನಂತರ ನಾಶಪಡಿಸುವಂತೆ ಆದೇಶಿಸಲಾಗಿದೆ.

(ಶೀಘ್ರಲಿಪಿಗಾರರು ನನ್ನ ಉಕ್ತಲೇಖನಕ್ಕೆ ನೇರವಾಗಿ ಗಣಕೀಕರಿಸಿದ್ದು, ಸೂಕ್ತ ತಿದ್ದುಪಡಿಗಳನ್ನು ಮಾಡಿದ ನಂತರ, ತೆರೆದ ನ್ಯಾಯಾಲಯದಲ್ಲಿ ಇಂದು ದಿನಾಂಕ 25 ನೇ ಮಾರ್ಚ್ 2026 ರಂದು ತೀರ್ಪನ್ನು ಘೋಷಿಸಲಾಯಿತು)

(ಅರುಣ್ ಚೌಗುಲೆ)
ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.,ನ್ಯಾಯಾಲಯ, ಯಾದಗಿರಿ

<u>ಅನುಬಂಧ</u>

**<u>1. ಅಭಿಯೋಜನೆಯವರ ಪರ ಸಾಕ್ಷಿದಾರರ ಪಟ್ಟಿಃ</u>**

ಪ್ರಾಸಾ-1 : ಶ್ರೀ ಶಿವಶರಣಪ್ಪ ತಂದೆ ಸಂಗಣ್ಣ.
ಪ್ರಾಸಾ-2 : ಶ್ರೀ ಶರಣಪ್ಪ ತಂದೆ ಶಿವಗ.
ಪ್ರಾಸಾ-3 : ಶ್ರೀ ಮರಿಲಿಂಗಪ್ಪ ತಂದೆ ಹನುಮಂತ.
ಪ್ರಾಸಾ-4 : ಶ್ರೀ ದೇವರಾಜ ತಂದೆ ಸಾಬಣ್ಣ.

**KAYG030049432018**

ಪ್ರಾಸಾ-5 : ಶ್ರೀ ಸಿದ್ರಾಮಪ್ಪ ತಾಳಿಕೋಟೆ ತಂದೆ ಶ್ರೀಶೈಲ.
ಪ್ರಾಸಾ-6 : ಶ್ರೀ ವಿ.ಕೆ ಗಾಣಗೇರ್.

**2.** ಅಭಿಯೋಜನೆಯವರ ಪರ ದಾಖಲೆಗಳ ಪಟ್ಟಿಃ

ನಿಪಿ-1 : ಸ್ಥಳ ಪಂಚನಾಮೆ.
ನಿಪಿ-2 : ವಾಹನದ ಬಿ-ರಿಜಿಸ್ಟರ್ ಎಕ್ಸಾಟ್ರ್ಯಾಕ್ಟ.
ನಿಪಿ-3 : ಶೋಧನಾ ಸಮುಚಿತ ಆಧಾರ ಪತ್ರ.
ನಿಪಿ-4 : ಮಾದರಿ ಚೀಟಿ ಮತ್ತು ಶೀಲು.
ನಿಪಿ-5 : ದೂರು.
ನಿಪಿ-6 : ಪ್ರ.ವ.ವರದಿ.

**3.** ಅಭಿಯೋಜನೆ ಪರ ಗುರುತಿಸಲಾದ ಮುದ್ದೆ ಮಾಲುಗಳ ಪಟ್ಟಿಃ

ಮು.ಮಾ 1 ರಿಂದ 4 : ಎರಡು ಖಾಲಿ ಟೆಟ್ರಾ ಪ್ಯಾಕೆಟಗಳು, ಒಂದು ಟಿನ್ ಕ್ಯಾನ್ ಮತ್ತು ಒಂದು ಬಿಯರ್ ಬಾಟಲಿ.

**4.** ಆರೋಪಿತರ ಪರ ವಿಚಾರಣೆ ಮಾಡಿದ ಸಾಕ್ಷಿದಾರರುಃ

- ಇಲ್ಲ -

**5.** ಆರೋಪಿತರ ಪರ ದಾಖಲೆಗಳ ಪಟ್ಟಿಃ

- ಇಲ್ಲ -

(ಅರುಣ್ ಚೌಗುಲೆ)
ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.,ನ್ಯಾಯಾಲಯ, ಯಾದಗಿರಿ.

ARUN GANGAPPA CHOUGULE

Digitally signed by ARUN GANGAPPA CHOUGULE
Date: 2026.03.26 09:55:22 +0530